ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ25-02-2025 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಕೆ ಜಿ ವಕೀಲರಿಂದಃ

3 ನೇ ಪ್ರತಿವಾದಿ ನನ್ನ ತಂದೆ. 4 ನೇ ಪ್ರತಿವಾದಿ ನನ್ನ ತಾಯಿ. 1 ನೇ ಪ್ರತಿವಾದಿ ನನ್ನ ಮೃತ ಸಹೋದರನಾದ ಗಣೇಶ ರಾಮಚಂದ್ರ ಹೆಗಡೆ ರವರ ಹೆಂಡತಿ ಹಾಗೂ 2 ನೇ ಪ್ರತಿವಾದಿಯು ಆತನ ಮಗಳು. ನನ್ನ ಮದುವೆಯು 1994 ರಲ್ಲಿ ಆಗಿರುತ್ತದೆ. ನನಗೆ ಒಬ್ಬ ಮಗಳಿದ್ದು ಆಕೆಯು ದಾವಣಗೆರೆಯ ಕಾಲೇಜಿನಲ್ಲಿ ಸೈಕಲೊಜಿ ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಗಂಡನ ಹೆಸರು ಗಜಾನನ ಪರಮೇಶ್ವರ ಹೆಗಡೆ ಹಾಗೂ ಅವರು ವೈದ್ಯರಾಗಿರುತ್ತಾರೆ. ಅವರು 2013 ರಲ್ಲಿ ಮರಣ ಹೊಂದಿರುತ್ತಾರೆ. ನಾನು ನನ್ನ ಮಗಳೊಂದಿಗೆ ದಾವಣಗೆರೆಯಲ್ಲಿ ವಾಸವಿದ್ದು ಆಗಾಗ ನನ್ನ ತಾಯಿ ಮನೆಗೆ ಬಂದು ಹೋಗಿ ಮಾಡುತ್ತೇನೆ. ನನ್ನ ತಮ್ಮನಾದ ಗಣೇಶ ರವರ ಮದುವೆ 10 ವರ್ಷಗಳ ಹಿಂದೆ ಅಂದರೆ 2014 ರಲ್ಲಿ ಆಗಿರುತ್ತದೆ. ನನ್ನ ತಮ್ಮ 2021 ರಲ್ಲಿ ಮರಣ ಹೊಂದಿರುತ್ತಾರೆ.

ನನ್ನ ತಮ್ಮನು ಮರಣ ಹೊಂದುವ ಪೂರ್ವದಲ್ಲಿ ನಮ್ಮ ಕುಟುಂಬದಲ್ಲಿ ನಾನು ಹಾಗೂ ಪ್ರತಿವಾದಿಯರು ಚೆನ್ನಾಗಿ ಇದ್ದೆವು. 1 ನೇ ಪ್ರತಿವಾದಿಯು ಹಿಂದುಳಿದ ಜಾತಿಗೆ ಸೇರಿದವರಾಗಿರುತ್ತಾರೆ ಎಂದರೆ ಸರಿ. ನನ್ನ ತಮ್ಮನು ತನ್ನ ಜೀವಿತಾವಧಿಯಲ್ಲಿ ನಮ್ಮ ಕುಟುಂಬದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ದಾವಾಸ್ತಿಗಳು 3 ನೇ ಪ್ರತಿವಾದಿಗೆ ಅವರ ತಂದೆಯಿಂದ ಬಂದಿರುತ್ತದೆ. 3 ನೇ ಪ್ರತಿವಾದಿಗೆ ಒಬ್ಬ ಸಹೋದರ ಹಾಗೂ ಒಬ್ಬ ಸಹೋದರಿ ಇರುತ್ತಾರೆ. ದಾವಾಸ್ತಿಗಳು ನಮ್ಮ ತಂದೆಯವರಿಗೆ ಅವರ ಕುಟುಂಬದಲ್ಲಿ ಆದ ಹಿಸ್ಸೆಯಲ್ಲಿ ಅವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಹಿಸ್ಸೆಯ ದಾಖಲೆಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾಕ್ಷಿಗೆ ನಿ.ಪಿ-12 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಸರಿ ಇದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ-12 ರಲ್ಲಿ ನನ್ನ ತಂದೆಯ ಸಹೋದರಿಯಾದ ಮಹಾದೇವಿಯವರ ಹೆಸರು ನಮೂದು ಇರುವುದಿಲ್ಲ. ನನ್ನ ಪತಿಯ ಮರಣಾನಂತರ ನಾನು ಶಿರಸಿಯಲ್ಲಿರುವ ನನ್ನ ಗಂಡನ ಮನೆಯಲ್ಲಿ ವಾಸವಿದ್ದೆ. ನನ್ನ ಗಂಡನ ಕುಟುಂಬದಲ್ಲಿ ಜಮೀನುಗಳು ಇದೆ. ಅವುಗಳನ್ನು ಅವರ ತಮ್ಮ ವೈವಾಟ ಮಾಡುತ್ತಾರೆ. ಅದು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ.

ನನ್ನ ತಮ್ಮ ಹಾಗೂ ನನ್ನ ತಂದೆಯವರ ನಡುವೆ ದಾವಾಸ್ತಿಗಳಿಗೆ ಸಂಬಂದಿಸಿದಂತೆ ವಿಭಾಗ ವಾಗಿರುತ್ತದೆ ಎಂದರೆ ಸರಿ. ಅದರಂತೆ ನಿ.ಪಿ-13 ಮ್ಯೂಟೇಶನ್ ಎಂಟ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಲ್ಲಿ ಶಶಿಗುಳಿ ಗ್ರಾಮದ ಆಸ್ತಿಯನ್ನು ನನ್ನ ತಮ್ಮನ ಪಾಲಿಗೆ ಕೊಟ್ಟು ಇಟಗಿ ಗ್ರಾಮದಲ್ಲಿ ಇರುವ ಆಸ್ತಿಗಳನ್ನು ನನ್ನ ತಂದೆಯ ಪಾಲಿಗೆ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 3 ನೇ ಪ್ರತಿವಾದಿಗೆ ಗಾಡಿಯನ್ನು ಚಲಾಯಿಸಲು ಸಾದ್ಯವಾಗದೆ ಇರುವ ಕಾರಣ ಶಶಿಗುಳಿ ಗ್ರಾಮದ ಆಸ್ತಿಗಳನ್ನು ನನ್ನ ತಮ್ಮನಿಗೆ ವೈವಾಟಿ ಮಾಡಲು ಬಿಟ್ಟುಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ತಮ್ಮನು ವಿಶೇಷಚೇತನ ಆಗಿದ್ದನು ಎಂದರೆ ಸರಿಯಲ್ಲ. ಆತನಿಗೆ ಸಕ್ಕರೆ ಖಾಯಿಲೆ ಇತ್ತು ಆದರೆ ಆರೋಗ್ಯವಂತನಾಗಿದ್ದನು. ದಾವಾಸ್ತಿಗಳು ನನ್ನ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿಗಳಾಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**